ಸಿ.ಸಿ .ನಂ.126/2023 ಪಿಡಬ್ಲೂಃ 1

ದಿನಾಂಕಃ 29-11-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎನ್ ಎಮ್ ಎನ್ ವಕೀಲರಿಂದಃ**

18. ಸಹಕಾರಿ ಸಂಘದ ಮಾರಾಟ ಅಧಿಕಾರಿಯ 64 enquiry ನಡೆಯುತ್ತಿದೆ. ಆದೇಶ ಇನ್ನೂ ಬಂದಿಲ್ಲ. ಎರಡು ಸಾಲಕ್ಕೆ ಹಾಗೂ ಮಂಜುನಾಥ ಜಟ್ಟಿ ಪಟಗಾರರವರು ಮಾಡಿದ ಸಾಲಕ್ಕೆ ಸಂಬಂಧಪಟ್ಟಂತೆ enquiry ನಡೆಯುತ್ತಿದೆ . ಅದಕ್ಕೆ ಸಂಬಂಧಪಟ್ಟ ದಾಖಲಾತಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಸಾಕ್ಷಿ ಕೇಸಿನ ಕಡತದಲ್ಲಿರುವ ದಾಖಲಾತಿ ನೋಡಿ ದಿಃ 20-09-2021 ರ ಆದೇಶವನ್ನು ಹಾಜರು ಪಡಿಸಿರುವುದಾಗಿ ನುಡಿದಿರುತ್ತಾರೆ . ಅದು 64 enquiry ಮಾಡಲು ಸರಿತಾ ಬೇತಾಳಕರರವರಿಗೆ ಕೊಟ್ಟಿರುವ ಆದೇಶ. ಎನ್ ವಿ ನಾಯ್ಕರವರ enquiry ಮಾಡುವ ಸಂದರ್ಭದಲ್ಲಿ ನನ್ನ ಹೇಳಿಕೆಯನ್ನು ಕೂಡ ಪಡೆದಿದ್ದಾರೆ . ನಾನು ಕೊಟ್ಟಿರುವ ಹೇಳಿಕೆ ಅವರ ವರದಿಯಲ್ಲಿದೆ. ಅದರ ಪ್ರತಿ ನಮ್ಮ ಕಚೇರಿಯಲ್ಲಿದೆ . ಎ ಆರ್ ರವರು ಸರಿತಾ ಬೇತಾಳಕರರವರಿಗೆ 64(1)ರಡಿ enquiry ಮಾಡಬೇಕೆಂದು ಆದೇಶ ಮಾಡಿರುತ್ತಾರೆ . ಈ ಆದೇಶದಲ್ಲಿ ನಮೂದಿಸಿದ ಮಾತ್ರಕ್ಕೆ ಆರೋಪಿಯು ಸಂಸ್ಥೆಯೊಂದಿಗೆ ಮಾಡಿದ ಅವ್ಯವಹಾರ ಸ್ಥಿಮಿತವಾಗಿತ್ತಾ ಎಂದರೆ ಸಾಕ್ಷಿ ಮತ್ತು ಅವ್ಯವಹಾರ ಇತ್ತು ಎಂದು ನುಡಿದಿರುತ್ತಾರೆ . ಸಹಾಯಕ ನಿಭಂದಕರ ಆದೇಶವನ್ನು ಓದಿದ್ದೇನೆ, ಸರಿಯಾಗಿ ನೆನಪಿಲ್ಲ. ಸಾಕ್ಷಿ ಸದರಿ ಆದೇಶವನ್ನು ಓದಿ ಇದನ್ನು ಹೊರತು ಪಡಿಸಿ ಅದಕ್ಕಿಂತ ಮೊದಲು ಒಂದು ಕೋಟಿಗಿಂತ ಹೆಚ್ಚು ಅವ್ಯವಹಾರ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ . ಈ ಆದೇಶಕ್ಕೆ ಸಂಬಂಧಪಟ್ಟಂತೆ ಸರಿತಾ ಬೇತಾಳಕರರವರು ನನ್ನ ಹೇಳಿಕೆಯನ್ನು ಪಡೆದಿಲ್ಲ. ಆರೋಪಿ ಸ್ವಲ್ಪ ಹಣವನ್ನು ಮರು ಪಾವತಿಸಿದ್ದಾರೆ ಎಂಬ ವಿಷಯವನ್ನು ನಾನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ . ವಿಚಾರಣೆಯ ಸಂಬಂಧದಲ್ಲಿ ಆ ಪ್ರಶ್ನೆ ನನಗೆ ಕೇಳಿಲ್ಲ ಕಾರಣ ನಾನು ಹೇಳಿಲ್ಲ. ಎನ್ ವಿ ನಾಯ್ಕರವರು ಪ್ರಶ್ನೆಗಳನ್ನು ಲಿಖಿತ ರೂಪದಲ್ಲಿ ಕೇಳಿದ್ದರು . ಅಲ್ಲಿ ಯಾವ

ಯಾವ ಪ್ರಶ್ನೆಗಳಿದ್ದವು ಸರಿಯಾಗಿ ನೆನಪಿಲ್ಲ. ಲಿಖಿತ ಪ್ರಶ್ನೆಗಳ ಸಾರಾಂಶ ನಮ್ಮ ಕಚೇರಿಯಲ್ಲಿದೆ. ಎನ್ ವಿ ನಾಯ್ಕರವರು ಪ್ರಶ್ನೆಗಳನ್ನು ಕೇಳಿದಾಗ ಒಂದೊಮ್ಮೆ ಆರೋಪಿ ಹಣವನ್ನು ಮರು ಪಾವತಿಸಿದ್ದರೆ ಅದನ್ನು ಹೇಳಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಅವರು ದಾಖಲಾತಿಗಳನ್ನು ಪರಿಶೀಲಿಸಿದರು ಹಾಗೂ ಆ ಬಗ್ಗೆ ಹೇಳಿಲ್ಲ ಕಾರಣ ನಾನು ಹೇಳಿಲ್ಲ . ಆದೇಶ ದಿಃ 20-09-2023ರ ವಿಚಾರಣಾಂಶ 1 ರಲ್ಲಿ ನಮೂದಿರುವ ವಿವರವನ್ನು ನಾನಾಗಲೀ ನಮ್ಮ ಸಂಸ್ಥೆಯವರಾಗಲೀ ಈ ಪೂರ್ವ ತಿಳಿಸಿದ್ದು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಲ ನೀಡುವಾಗ ಯಾವುದೇ ಪ್ರೊಪರ್ಟಿಯನ್ನು ಮೊರ್ಟಗೇಜ್ ಮಾಡುವಾಗ ಎಷ್ಟು ದಿನಗಳವರೆಗೆ ಸಾಲದ ಹಣವನ್ನು ಅವರ ಖಾತೆಗೆ ಜಮಾ ಮಾಡಬೇಕು ಎಂದರೆ ಸಾಕ್ಷಿ ದಾಖಲಾತಿ ನೋಡಿ ಹೇಳಬೇಕು ಎಂದು ನುಡಿದಿರುತ್ತಾರೆ . ಸಂಘದಲ್ಲಿರುವ ಪೈಲ್ ನ್ನು ನೋಡಿ ಹೇಳಬೇಕು.

19. ತಿಮ್ಮಪ್ಪ ಹನುಮ ಪಟಗಾರರವರಿಗೆ ಸಾಲದ ಹಣವನ್ನು ಅಕೌಂಟ್ ಪೆ ಚೆಕ್ ಮೂಲಕ ನೀಡಿರುತ್ತೇವೆ . ತಿಮ್ಮಪ್ಪ ಹನುಮ ಪಟಗಾರರವರಿಗೆ ಹಣವನ್ನು ನೀಡಿದ ದಿನವೇ ಸದರಿ ಹಣ ತಿಮ್ಮಪ್ಪ ಹನುಮ ಪಟಗಾರರವರ ಖಾತೆಯಿಂದ ಮಂಜುನಾಥ ಜಟ್ಟಿ ಪಟಗಾರರವರ ಖಾತೆಗೆ ಹೋಗಿದೆ ಎಂದರೆ ಗೊತ್ತಿಲ್ಲ. ಅದೇ ದಿನ ಆ ಹಣ ನಮ್ಮ ಬ್ಯಾಂಕಿಗೆ ಜಮಾ ಆಗಿದೆ ಎಂದರೆ ಸರಿಯಲ್ಲ . ತಿಮ್ಮಪ್ಪ ಹನುಮ ಪಟಗಾರ ಅವರಂತೆಯೇ ಇನ್ನೂ ಮೂರು ಜನರಿಗೆ ಸಾಲವನ್ನು ಮಂಜೂರು ಮಾಡಿದ್ದು ಆ ಹಣವೂ ಕೂಡ ನಂತರ ಅದೇ ದಿನ ಆರೋಪಿಯ ಖಾತೆಗೆ ಹೋಗಿದ್ದು, ಪುನಃ ಬ್ಯಾಂಕಿಗೆ ಜಮಾ ಆಗಿರುತ್ತದೆ ಎಂದರೆ ಸರಿಯಲ್ಲ. ಕೆಡಿಸಿಸಿ ಬ್ಯಾಂಕಿನಲ್ಲಿರುವ ನಮ್ಮ ಅಕೌಂಟಿನ ದಾಖಲಾತಿಯನ್ನು ನೋಡಿರುತ್ತೇನೆ . ಆ ದಾಖಲಾತಿಗಳಲ್ಲಿ ಸಾಲಗಾರರ ಖಾತೆಯಿಂದ ಮಂಜುನಾಥ ಜಟ್ಟಿ ಪಟಗಾರರವರ ಖಾತೆಗೆ ಹಣ ವರ್ಗಾವಣೆಯಾಗಿದ್ದು, ನಂತರ ಅವರ ಖಾತೆಯಿಂದ ನಮ್ಮ ಬ್ಯಾಂಕಿಗೆ ಹಣ ಜಮೆ ಆಗಿರುವುದು ನಮೂದಿದೆ ಎಂದರೆ ಸರಿಯಲ್ಲ . ತಿಮ್ಮಪ್ಪ ಹನುಮ ಪಟಗಾರರವರಿಗೆ ದಿಃ 27-05-2020 ರಂದು 19,40,000/- ರೂ. ಆರೋಪಿಯ ಖಾತೆಗೆ ವರ್ಗಾವಣೆ ಮಾಡಿದ್ದು ನಂತರ ಆರೋಪಿ ಅದೇ ದಿನ ದಿಃ 27-05-2020 ರಂದು ಚೆಕ್ ನಂ. 729892 ರ ಮುಖಾಂತರ ನಮ್ಮ ಬ್ಯಾಂಕಿಗೆ ಹಣವನ್ನು ವರ್ಗಾವಣೆ

ಮಾಡಿರುತ್ತಾರೆ ಎಂದರೆ ಸಾಕ್ಷಿ ಆರೋಪಿ 19 ಲಕ್ಷ ರೂಪಾಯಿ ತುಂಬಿದ್ದಾರೆ ಆದರೆ ಯಾವ ರೀತಿ ತುಂಬಿದ್ದಾರೆ ನಮಗೆ ಗೊತ್ತಿಲ್ಲ. ದಿಃ 27-05-2020 ರಂದು ನಾವು ಶ್ರೀದೇವಿ ಗಣಪತಿ ಪಟಗಾರ ರವರಿಗೆ 19 ಲಕ್ಷ ರೂಪಾಯಿ ಸಾಲ ಮಂಜೂರು ಮಾಡಿದ್ದು ಅದೇ ದಿನ ಶ್ರೀದೇವಿ ಗಣಪತಿ ಪಟಗಾರ ರವರು 19 ಲಕ್ಷ ರೂಪಾಯಿಗಳನ್ನು ಆರೋಪಿ ಮಂಜುನಾಥ ಜಟ್ಟಿ ಪಟಗಾರ ರವರ ಖಾತೆಗೆ ವರ್ಗಾವಣೆ ಮಾಡಿದ್ದು , ಅದೇ ದಿನ ಮಂಜುನಾಥ ಜಟ್ಟಿ ಪಟಗಾರರವರು 19 ಲಕ್ಷ ರೂಪಾಯಿಗಳನ್ನು ನಮ್ಮ ಬ್ಯಾಂಕಿಗೆ ಚೆಕ್ ನಂ. 729871 ರ ಮುಖಾಂತರ ವರ್ಗಾಯಿಸಿರುತ್ತಾರೆ ಎಂದರೆ ಸಾಕ್ಷಿ ಅವರು ಅವ್ಯವಹಾರಕ್ಕೆ ಸಂಬಂಧಪಟ್ಟಂತೆ 19 ಲಕ್ಷ ರೂಪಾಯಿ ತುಂಬಿದ್ದಾರೆ ಆದರೆ ಎಲ್ಲಿಂದ ತುಂಬಿದ್ದಾರೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ .

20. ರಾಮರಾಯ ಹೆಚ್ ನಾಯ್ಕ ರವರಿಗೆ ದಿಃ 28-05-2020 ರಂದು 19,50,000/- ರೂ. ಹಾಕಿ ಆ ಹಣ ಮಂಜುನಾಥ ಜಟ್ಟಿ ಪಟಗಾರ ರವರ ಖಾತೆಗೆ ಜಮಾ ಆಗಿ ಅವರು ಅದೇ ದಿನ ಆರೋಪಿ ಚೆಕ್ ನಂ. 729874 ಮುಖಾಂತರ 19,50,000/- ರೂ. ಗಳನ್ನು ನಮ್ಮ ಬ್ಯಾಂಕಿಗೆ ಜಮಾ ಮಾಡಿರುತ್ತಾರೆ ಎಂದರೆ ಸಾಕ್ಷಿ ನಾವು ರಾಮರಾಯ್ ಹೆಚ್ ನಾಯ್ಕರವರಿಗೆ 19,50,000/- ರೂ.ಗಳಿಗೆ ಅಕೌಂಟ್ ಪೆ ಚೆಕ್ ನ್ನು ಕೊಟ್ಟಿದ್ದೇವೆ ಆದರೆ ಆರೋಪಿ ಯಾವ ರೀತಿಯ ಹಣವನ್ನು ಕೊಟ್ಟಿದ್ದಾರೆ ಗೊತ್ತಿಲ್ಲ ಆದರೆ 19,50,000/- ರೂಪಾಯಿ ಕಟ್ಟಿದ್ದಾರೆ.

21. ಮಂಜುನಾಥ ಹನುಮಂತ ನಾಯ್ಕರವರಿಗೆ ದಿಃ 28-05-2020 ರಂದು 19,50,000/- ರೂ. ಹಾಕಿ ಆ ಹಣ ಮಂಜುನಾಥ ಜಟ್ಟಿ ಪಟಗಾರ ರವರ ಖಾತೆಗೆ ಜಮಾ ಆಗಿ ಅವರು ಅದೇ ದಿನ ಆರೋಪಿ ಚೆಕ್ ನಂ. 729875 ಮುಖಾಂತರ 19,50,000/- ರೂ. ಗಳನ್ನು ನಮ್ಮ ಬ್ಯಾಂಕಿಗೆ ಜಮಾ ಮಾಡಿರುತ್ತಾರೆ ಎಂದರೆ ಸಾಕ್ಷಿ ನಾವು ಮಂಜುನಾಥ ಹನುಮಂತ ರಾಯ್ ವರಿಗೆ 19,50,000/-

ರೂ.ಗಳಿಗೆ ಅಕೌಂಟ್ ಪೆ ಚೆಕ್ ನ್ನು ಕೊಟ್ಟಿದ್ದೇವೆ ಆದರೆ ಆರೋಪಿ ಅವರ ಅವ್ಯವಹಾರಕ್ಕೆ ಸಂಬಂಧಪಟ್ಟಂತೆ 19,50,000/- ಕಟ್ಟಿದ್ದಾರೆ ಆದರೆ ಯಾವ ರೀತಿ ಹಣವನ್ನು ಕಟ್ಟಿದ್ದಾರೆ ಗೊತ್ತಿಲ್ಲ.

22. ಎನ್ ವಿ ನಾಯ್ಕರವರ ವರದಿಯಲ್ಲಿ ಆರೋಪಿ ಮೇಲ್ಕಂಡ ದಿನಾಂಕಗಳನ್ನು ಚೆಕ್ ಮೂಲಕ ಇಂತಿಂತ ದಿನಾಂಕಗಳಂದು ಇಂತಿಷ್ಟು ಹಣವನ್ನು ಇಂತಿಂತ ಚೆಕ್ ನಂಬರುಗಳ ಮುಖಾಂತರ ಹಣವನ್ನು ಸಂದಾಯ ಮಾಡಿರುವುದನ್ನು ಬರೆದಿದ್ದಾರಾ ಎಂದರೆ ಸಾಕ್ಷಿ ಹಣ ಸಂದಾಯ ಮಾಡಿದ ಬಗ್ಗೆ ಪುಟ ಸಂಖ್ಯೆ 12 ರಲ್ಲಿ ಪಾವತಿ ನಂಬರ ಹಾಗೂ ಹಣದ ಬಗ್ಗೆ ಬರೆದಿದ್ದಾರೆ ಹಾಗೂ ಅವ್ಯವಹಾರ ಮಾಡಿದ ಹಣ ಜಮಾ ಮಾಡಿದ ಬಗ್ಗೆ ಬರೆದಿದ್ದಾರೆ ಎಂದು ನುಡಿದಿರುತ್ತಾರೆ . ದಿಃ 27-05-2020 ಜಹಾಗೂ ದಿಃ 28-05-2020 ರಂದು ಆರೋಪಿ ಮಂಜುನಾಥ ಜಟ್ಟಿ ಪಟಗಾರರವರು ನಮ್ಮ ಬ್ಯಾಂಕಿಗೆ ಬಂದಿರಲಿಲ್ಲ . ಸಾಕ್ಷಿ ಪುನಃ ಬ್ಯಾಂಕಿಗೆ ಬಂದಿದ್ದರು ಎಂದು ನುಡಿದಿರುತ್ತಾರೆ . ದಿನಾಂಕ 27 ಹಾಗೂ 28 ಕ್ಕೆ ಸಾಲಗಾರರು ಬ್ಯಾಂಕಿಗೆ ಬಂದಿದ್ದರು. ದಿಃ 27-05-2020 ರಂದು ದಿಃ 28-05-2020 ರಂದು ಸಾಲಗಾರರು ಬಂದು ಇಂತಿಂತಹ ಹಣವನ್ನು ಮಂಜುನಾಥ ಜಟ್ಟಿ ಪಟಗಾರರವರ ಖಾತೆಗೆ ಜಮಾ ಮಾಡಿ ಎಂದು ವೋಚರ ಕೊಟ್ಟಿಲ್ಲ. ಸಾಲಗಾರರ ಖಾತೆಯಿಂದ ಮಂಜುನಾಥ ಜಟ್ಟಿ ಪಟಗಾರ ರವರ ಖಾತೆಗೆ ಹಣ ಕಳಿಸಿ ಎಂದು ಯಾರು ಹೇಳಿಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ತನ್ನ ಖಾತೆಯಿಂದ ಮತ್ತೊಬ್ಬರ ಖಾತೆಗೆ ಹಣವನ್ನು ವರ್ಗಾವಣೆ ಮಾಡುವಾಗ ತನ್ನ ಖಾತೆ ಇರುವ ಬ್ಯಾಂಕಿಗೆ ಹೋಗಿ ವೋಚರನ್ನು ಕೊಡಬೇಕಾಗುತ್ತದೆ ಎಂದರೆ ಸರಿ . ನಾಲ್ಕು ಸಾಲಗಾರರು ಹೇಗೆ ಹಣವನ್ನು ಕೊಟ್ಟಿದ್ದರು ನಮಗೆ ಗೊತ್ತಿಲ್ಲ . ತಿಮ್ಮಪ್ಪ ಹನಮು ಪಟಗಾರ ರವರು ಆರೋಪಿಗೆ ಹೇಗೆ ಹಣವನ್ನು ಕೊಟ್ಟರು ಗೊತ್ತಿಲ್ಲ . ಒಂದೊಮ್ಮೆ ಆ ಹಣವನ್ನು ಚೆಕ್ ಮುಖಾಂತರ ಅಥವಾ ವೋಚರ ಮುಖಾಂತರ ಕೊಟ್ಟಿದ್ದರೆ ಆ ದಾಖಲಾತಿಗಳು ನಮ್ಮ ಬ್ಯಾಂಕಿನಲ್ಲಿ ಇರುತ್ತದೆ ಎಂದರೆ ಸರಿ . ಕೆಡಿಸಿಸಿ ಬ್ಯಾಂಕಿನಿಂದ ನಮ್ಮ ಸಂಘದ ಅಕೌಂಟ್ ಗೆ ಯಾವ ರೀತಿ ಜಮೆ ಮಾಡಿದ್ದಾರೆ ನಮಗೆ ಗೊತ್ತಿಲ್ಲ. ಅವರ ವೈಯಕ್ತಿಕ ಖಾತೆಯ ದಾಖಲಾತಿ ನಮಗೆ ಸಿಗುವುದಿಲ್ಲ. ತಿಮ್ಮಪ್ಪ

ಪಿಡಬ್ಲೂಃ 1

ಹನಮು ಪಟಗಾರ ನಮ್ಮ ಬ್ಯಾಂಕಿನಲ್ಲಿ ಸಾಲದ ಖಾತೆಯನ್ನು ಹೊಂದಿದ್ದರು ಎಂದರೆ ಸರಿ . ಅವರ ಖಾತೆಗೆ ಸಾಲ ಆಗಿತ್ತು . ನಿಪಿ-15 ಇದು ಆರೋಪಿಯ ಸಾಲದ ಡೆಬಿಟ್ ಅದರ ಪ್ರಕಾರ ತಿಮ್ಮಪ್ಪ ಹನಮು ಪಟಗಾರ ರವರ ಖಾತೆಗೆ 19 ಲಕ್ಷ ರೂಪಾಯಿ ಸಾಲ ತೋರಿಸಿರುತ್ತೇವೆ . ಸಾಲದ ಹಣ ಮಂಜುನಾಥ ಜಟ್ಟಿ ಪಟಗಾರವರ ಖಾತೆಗೆ ಚೆಕ್ ಮುಖಾಂತರ ಹೋಯಿತಾ ಅಥವಾ ವೋಚರ ಮುಖಾಂತರ ಹೋಗಿರುತ್ತದೆಯಾ ಗೊತ್ತಿಲ್ಲ ಅದು ನಮ್ಮ ಬ್ಯಾಂಕಿನಲ್ಲಿ ಆಗಿರುವ ವ್ಯವಹಾರ ಅಲ್ಲ . ಸಾಲಗಾರನ ಖಾತೆ ಇರುವ ಕೆಡಿಸಿಸಿ ಬ್ಯಾಂಕಿನಲ್ಲಿ ಆಗಿರುತ್ತದೆ. ಕೆಡಿಸಿಸಿ ಬ್ಯಾಂಕಿನ ಅಕೌಂಟ್ ಸ್ಟೇಟ್ ಮೆಂಟ್ ನೋಡಿದರೆ ಅದು ಯಾವ ಮುಖಾಂತರ ವರ್ಗಾವಣೆ ಆಗಿದೆ ಗೊತ್ತಿಲ್ಲ . ಕೆಡಿಸಿಸಿ ಬ್ಯಾಂಕಿನ ದಾಖಲಾತಿಗಳನ್ನು ತರಿಸಲು ಆರೋಪಿ ಅರ್ಜಿಯನ್ನು ನೀಡಿದರೆ ನಮ್ಮ ಯಾವುದೇ ತಕರಾರು ಇಲ್ಲ . ಎನ್ ವಿ ನಾಯ್ಕರವರ ವರದಿಯಲ್ಲಿ ಯಾವ ರಸೀದಿ ನಂಬರ ಮೂಲಕ ಹಣ ಸಂದಾಯವಾಗಿದೆ ಎಂದರೆ ಸಾಕ್ಷಿ ದಾಖಲಾತಿ ನೋಡಿ ಹೇಳಬೇಕು . ಪುಟ ಸಂಖ್ಯೆ 12 ರಲ್ಲಿ ನಮೂದಿದೆ ಆದರೆ ಕಡತದಲ್ಲಿರುವ ದಾಖಲಾತಿಯಲ್ಲಿ ಸಿಗುತ್ತಿಲ್ಲ. ಅದು ನಮ್ಮ ಸಂಘದ ರಸೀದಿ. ಸಂಘದ ರಸೀದಿ ನಾನು ನೋಡಿರುತ್ತೇನೆ. ಈ ಪ್ರಕರಣದ್ದಿರುವ ಸಂಘದ ರಸೀದಿಯನ್ನು ನೋಡಿರುವುದಿಲ್ಲ. ಅದನ್ನು ಹಣ ಜಮಾ ಮಾಡಿದಾಗ ಬ್ಯಾಂಕ್ ಸಿಬ್ಬಂದಿಗಳು ಕೊಡುತ್ತಾರೆ . ಯಾರು ಹಣ ಜಮಾ ಮಾಡುತ್ತಾರೋ ಅವರಿಗೆ ಕೊಡುತ್ತೇವೆ . ಈ ರೀತಿ ಹಣ ಜಮಾ ಮಾಡಿದಾಗ ಮಂಜುನಾಥ ಜಟ್ಟಿಪಟಗಾರರವರಿಗೆ ರಸೀದಿಯನ್ನು ನೀಡಿರಬಹುದು ನೆನಪಿಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.